ಬೇರೆ ಬೇರೆ ಮಠಗಳಲ್ಲಿ ವಾಸ್ತವ್ಯ, ನಾಲ್ಕಾರು ವರ್ಷಗಳ ಕಾಲ ಗೋಸ್ವಾಮಿಮಠದ ಆಧಿಪತ್ಯ ಹಾಗೂ ಪುನಃ ನದೀತೀರ ಇಲ್ಲವೆ ದೇವಸ್ಥಾನಗಳೇ ಅವರಿಗೆ ಆಶ್ರಯಸ್ಥಾನಗಳಾದವು. ಅವರು ತಮ್ಮ ಬರಹಗಳನ್ನು ಮುಂದುವರಿಸಿದ್ದು ಹೆಚ್ಚಿನ ಮಟ್ಟಿಗೆ ಸರಯೂ ತೀರದಲ್ಲಿ ಹಾಗೂ ಕಾಶಿಯ ಹನುಮಂತನ ದೇವಾಲಯದಲ್ಲಿ. ಪ್ರಾತಃಸಂಜೆಗಳಲ್ಲಿ ಜನರು ಸೇರುವೆಡೆ ಅವರ ಹರಿಕಥಾ ಸತ್ರಗಳು. ಅವರದೇ ಆದ ಮನೆಯೇ ಇಲ್ಲವಾಗಿದ್ದರೂ ಸದಾಕಾಲಕ್ಕೂ ಶ್ರೀರಾಮನನ್ನೇ 'ಮನೆಮಾಡಿಕೊಂಡ' ಸಾರ್ಥಕ ಬಾಳ್ವೆ ಅವರದು. ಅವರ ರಾಮಭಕ್ತಿಗೆ ಸರಿಸಾಟಿಯಿಲ್ಲ. ಒಮ್ಮೆ ಅವರು ಮಥುರೆಯ ಶ್ರೀಕೃಷ್ಣ ಮಂದಿರಕ್ಕೆ ಹೋದರು. ಆದರೆ ಅಲ್ಲಿನ ಮೂರ್ತಿಗೆ ನಮಸ್ಕರಿಸಲಿಲ್ಲ, ಕೈಕಟ್ಟಿ ನಿಂತರು. ಕಂಡವರಿಗೆಲ್ಲಾ ಸೋಜಿಗ. ಆಗ ತುಲಸೀ ನುಡಿದ ದೋಹೆ ಇದು:

**ಕರ ಮುರಲೀ, ಕಟಿ ಕಾಛನೀ ಭಲೇ ಬನೇ ಹೋ ನಾಥ್ ।**
**ತುಲಸೀ ಮಸ್ತಕ ತಬ್ ನವೇ ಜಬ್ ಧನುಷಬಾಣ ಲೇಉ ಹಾಥ್ ॥**

"ಪರಮ ಪ್ರತಾಪಿಯಾದ ಕೃಷ್ಣ, ಕೈಯಲ್ಲಿ ಕೊಳಲು ಹಿಡಿದು, ಸುಂದರ ವಸ್ತ್ರ ಧರಿಸಿ ಅಂದಚಂದವಾಗಿ ಕಾಣುತ್ತಿರುವೆ ಎಂಬುದು ನಿಜವೆ. ಆದರೆ ತುಲಸಿಯು ನಿನಗೆ ಕೈಮುಗಿದು, ಕಾಲು ಜೋಡಿಸಿ ಅಡ್ಡ ಬೀಳುವುದು, ಧನುಷ ಬಾಣಗಳನ್ನು ಹಿಡಿದು ನೀನು ನನಗೆ ದರ್ಶನ ನೀಡಿದಾಗಲೇ."

ಇಂದಿನ ಸಮಾಜಕ್ಕೆ ಬೇಕಾದದ್ದು ಕೋದಂಡದ ಪ್ರತಾಪ. ಕೋದಂಡಧಾರಿ ರಾಮನ ಆದರ್ಶವೇ ಇಂದಿನ ಹೇಡಿತನವನ್ನು ದೂರಮಾಡಿ ಸಮಾಜದಲ್ಲಿ ಪೌರುಷವನ್ನು ನೆಲೆಗೂಡಿಸೀತು ಎಂಬ ಭಾವ ತುಲಸಿಯವರನ್ನು ಆವರಿಸಿತ್ತು. ಹಾಗೆಂದೇ ಅವರು ಕೋದಂಡಧಾರಿಯನ್ನೇ ಏಕಮೇವ ಆದರ್ಶವನ್ನಾಗಿ ಜನರ ಮುಂದೆ ಪ್ರಸ್ತುತಪಡಿಸಿದರು.

ಐತಿಹಾಸಿಕ ಆಧಾರಗಳ ಪ್ರಕಾರ ತುಲಸೀದಾಸರು ಸರಯೂ ಪಾರೀಣ ಬ್ರಾಹ್ಮಣರು. ಅವರ ತಂದೆಯ ಹೆಸರು ಆತ್ಮಾರಾಮ ದುಬೆ, ತಾಯಿ ಹುಲಸೀ.

ತುಲಸೀದಾಸರು ರಾಮನ ಪರಮಭಕ್ತರಾದರು. ಲೋಭ ಮೋಹಗಳಿಂದ ದೂರರಾಗಿ, ವೀತರಾಗಿಗಳಾದ ಸಿದ್ಧರಾಗಿ, ನಮ್ರತೆಯ ಪ್ರತಿಮೂರ್ತಿಯಾಗಿ, ಪರಮ ಸುಶೀಲರಾಗಿ, ಸದಾಚಾರಿಗಳಾಗಿ ಪರಿವರ್ತನೆಗೊಂಡರು. ರಾಮನನ್ನುಳಿದು ಬೇರಾರ ಸ್ತುತಿಯನ್ನೂ ಅವರು ಮಾಡಲಿಲ್ಲ. ಅವರು ಕಾವ್ಯರಚನೆ ಮಾಡಿದ್ದು ಯಶಸ್ಸಿಗಾಗಲ್ಲ, ಹಣಕ್ಕಾಗಿ ಅಲ್ಲ. ಅವರೇ ಹೇಳುವಂತೆ **'ಸ್ವಾಂತಃಸುಖಾಯ'** – ಆತ್ಮಾನಂದಕ್ಕಾಗಿ.

ತುಲಸೀದಾಸರು ಯುಗಪ್ರವರ್ತಕರು. ಜನನಾಯಕರೂ ಹೌದು. ಅವರ ಕಾಲದಲ್ಲಿ ಇಸ್ಲಾಂ ಆಕ್ರಮಣ ಹಾಗೂ ಪ್ರಭಾವದಿಂದಾಗಿ ಹಿಂದೂಧರ್ಮ ಗಂಡಾಂತರಕ್ಕೊಳಗಾಗಿತ್ತು; ವರ್ಣಾಶ್ರಮಧರ್ಮ ಹಾಳಾಗಿತ್ತು. 'ಜಗತ್ತು ಮಿಥ್ಯೆ' ಎಂದು ಹೇಳಿ ಪಲಾಯನ ಸೂಕ್ತವನ್ನು ಪಠಿಸುತ್ತಿದ್ದ ಜನರನ್ನು ಅವರು ವಾಸ್ತವಿಕತೆಯ ನೆಲಗಟ್ಟಿನ ಮೇಲೆ ಹಿಡಿದು ತಂದು ನಿಲ್ಲಿಸಿದರು. ಅಲ್ಲಿ ಚೆಲ್ಲುವರಿದಿದ್ದ ಪ್ರಭುವಿನ ಐಶ್ವರ್ಯವನ್ನು, ಚೆಲುವನ್ನು ತೋರಿಸಿ ಅದನ್ನು ಆಸ್ವಾದಿಸಿ ಬದುಕುವ ಸಂದೇಶವನ್ನು ನೀಡಿದರು.

ತುಲಸೀದಾಸರ ಪ್ರಕಾರ ಭಕ್ತಿ ಎಲ್ಲರಿಗೂ ಅನಿವಾರ್ಯ. ಜಗತ್ತಿನಲ್ಲಿ ಅನ್ನ ನೀರು ಎಲ್ಲರಿಗೂ ಅನಿವಾರ್ಯವಾದಂತೆ ಭಕ್ತಿಯೂ ಅನಿವಾರ್ಯ. ಭಕ್ತಿಯ ಅಧಿಕಾರ ಎಲ್ಲರಿಗೂ ಇದೆ ಎಂದು ಅವರು ಘೋಷಿಸಿದರು. ಅವರು ಯಾವ ಸ್ವತಂತ್ರ ಸಂಪ್ರದಾಯವನ್ನೂ ಸ್ಥಾಪಿಸಲಿಲ್ಲ. 'ಹರಿಭಕ್ತಿಪಂಥ'ಕ್ಕಿಂತ ಮಿಗಿಲಾದ ಪಂಥ ಬೇರೊಂದಿಲ್ಲ ಎಂದು ಅವರು ಹೇಳಿದ್ದಾರೆ. 'ಜನ ಬದುಕಬೇಕೆಂದು' ನಮ್ಮ ಕನ್ನಡದ ರಾಘವಾಂಕ ಬರೆದರೆ ತುಲಸೀದಾಸರು ಲೋಕಕಲ್ಯಾಣಕ್ಕಾಗಿ, ಸಮಾಜದ 'ಶಿವ'ಕ್ಕಾಗಿ, 'ಶಿವೇತರಕ್ಷತಿ'ಗಾಗಿ ಕಾವ್ಯರಚನೆ ಮಾಡಿದರು.

ತುಲಸೀದಾಸರ ಬದುಕು, ಅವರ ಪ್ರಕೃತಿ ಹಾಗೂ ಸ್ವಭಾವ ಭಕ್ತಿಕಾಲದ ಎಲ್ಲ ಕವಿಗಳಿಗಿಂತಲೂ ವಿಭಿನ್ನ. ಅವರು ಬದುಕಿನಲ್ಲಿ ಸಮನ್ವಯತೆಯ ಪೂಜಾರಿಗಳು. ಜನರೆಲ್ಲರೂ ಯಾವ ಹಾದಿಯಲ್ಲಿ ನಡೆದು ಆತ್ಮರಕ್ಷಣೆ ಮತ್ತು ರಾಷ್ಟ್ರರಕ್ಷಣೆ ಮಾಡಬಹುದೋ ಅಂಥ ರಾಜಮಾರ್ಗವನ್ನು ಜನರಿಗೆ ತೋರಬಯಸಿದರು. ಜನಸಾಧಾರಣ ಭಾಷೆಯನ್ನು ಬಳಸುವುದು, ಸಮಾಜದ ಆಳವಾದ ಅಧ್ಯಯನ ಮಾಡುವುದು, ವೇದಶಾಸ್ತ್ರಗಳ ಮಂಥನದಿಂದ ಯುಗಾನುಕೂಲವಾದ, ಲಾಭಪ್ರದವಾದ ತತ್ತ್ವಗಳನ್ನು ಸಂಗ್ರಹಿಸುವುದು, ದುರ್ಭಾವನೆಗಳು ಹಾಗೂ ಲೋಭ–ಮೋಹಗಳ ಆಮಿಷಗಳ ಎದುರಿಗೆ ತಲೆಬಾಗದೆ ಇರುವುದು, ತಾವು ನಂಬಿದ ಆದರ್ಶಗಳಿಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡುವುದು – ಇವು ಅವರು ಹಾಕಿಕೊಟ್ಟ ಮೇಲ್ಪಂಕ್ತಿ. ತಮ್ಮ ಬದುಕನ್ನು ಒಬ್ಬ ವೈರಾಗಿಯಾಗಿ, ಸಂಸಾರತ್ಯಾಗಿಯ ರೂಪದಲ್ಲಿ ಆರಂಭಿಸಿ, ಬದುಕಿನ ಕಟುತ್ವ ಹಾಗೂ ಪೀಡಿತ ಜನಸಮುದಾಯದ ಸಂತಾಪಸಾಗರದ ದಾರುಣ ಅಲೆಗಳಿಂದ ನೊಂದು ಅವರು ಸಾಧನೆ ಕೈಗೊಂಡರು. ತಮ್ಮ ಬದುಕಿನ ಏರಿಳಿತಗಳೆಲ್ಲವನ್ನೂ ದಾಟಿ, **'ಸಿಯಾರಾಮಮಯ ಸಬ ಜಗಜಾನಿ, ಕರುವು ಪ್ರನಾಮ ಜೋರಿ ಜುಗ ಪಾನಿ'** (ಜಗವೆಲ್ಲ ಸೀತಾರಾಮಮಯವೆಂದು ಬಗೆದು ಎರಡು ಕೈಗಳನ್ನೂ ಜೋಡಿಸಿ ನಮಸ್ಕರಿಸು) ಎಂದು ಪ್ರತಿಜ್ಞೆಮಾಡಿ, ಸಕಲಜಗದಲ್ಲೂ ಸೀತಾರಾಮರನ್ನು ಕಂಡರು; ಭರತವರ್ಷದ ಮೃತಪ್ರಾಯ ಹಿಂದೂ ಜನತೆಗೆ ಅಮೃತಪಾನ ಮಾಡಿಸಿ, ಅದನ್ನು ಬದುಕಿಸಿದರು.

ತುಲಸೀದಾಸರು ಶ್ರೀರಾಮನ 'ಮರ್ಯಾದಾ ಪುರುಷೋತ್ತಮ' ರೂಪವನ್ನು ತಮ್ಮ ಕಾವ್ಯದ ವಸ್ತುವನ್ನಾಗಿ ಮಾಡಿಕೊಂಡು, ಮಾನವ ಜೀವನಕ್ಕೆ ವ್ಯಾಪಕವಾದ ಅಭಿವ್ಯಕ್ತಿಯನ್ನು ನೀಡಿದರು. ಆದರ್ಶ ಮತ್ತು ಕರ್ತವ್ಯಗಳನ್ನು ಭಕ್ತಿಯ ಜೊತೆ ಸೇರಿಸಿ ಒಂದು ರಾಮರಸವನ್ನು ತಯಾರಿಸಿದರು. ಸಿದ್ಧರು, ನಾಥರು, ಸಂತರು ಯಾವುದನ್ನು 'ನಿರ್ಗುಣ', 'ಶೂನ್ಯ' ಎಂದು ಕರೆದರೋ ಅದರಲ್ಲಿ ದೈವೀಪ್ರೇಮದ, ಭಕ್ತಿಯ ರಾಮರಸವನ್ನು ತುಲಸೀದಾಸರು ತುಂಬಿ ಮನೆಮನೆಗೆ ಹಂಚಿದರು. ಅದರಿಂದ ಹಿಂದೂಧರ್ಮ, ಹಿಂದೂಜನಾಂಗ, ಹಿಂದೂಸಂಸ್ಕೃತಿ, ಒಟ್ಟಾರೆ ಹೇಳುವುದಾದರೆ ಸಮಗ್ರ ಹಿಂದುತ್ವದ ಭಾವನೆ ಜೀವಂತವಾಗಿ ಮೈದಳೆಯಿತು. ಇಂಥ ಪವಾಡವನ್ನು ಮಾಡಿದ ಅವರ ವ್ಯಕ್ತಿತ್ವ ಎಷ್ಟೊಂದು ಸಮಗ್ರವೆಂದರೆ ಅವರು ಒಮ್ಮೆಗೇ ಸಾಹಿತ್ಯಶಿರೋಮಣಿ, ಚತುರ ಮುತ್ಸದ್ದಿ, ಧರ್ಮಸಂಸ್ಥಾಪಕ, ಸಮಾಜಸುಧಾರಕ ಹಾಗೂ ಯುಗನಿರ್ಮಾತೃವಾದರು. ಅವರು ನಮ್ಮ ಜೀವನದ ತ್ರಿವಿಕ್ರಮಶಕ್ತಿಯಾಗಿ ಮೂಲೆಮೂಲೆಯನ್ನು